

ನಿಧಿಯೊಂದನ್ನು ಹುಡುಕಲು ಹೊರಡುತ್ತಾರೆ. ನಿರ್ಮಮಕಾರದಲ್ಲಿ ಪಿಸ್ತೂಲ್ ಬಳಸಿ ಜನರನ್ನು ಕೊಲ್ಲುವ ಕ್ರೂರಿಗಳು ಇವರು. ಹರಿದ ಜೀನ್ಸ್ ಉಡುಗೆ, ಕೊಳಕಾದ ಚರ್ಮದ ಮೇಲುಡುಪುಗಳು, ಮಿರಮಿರನೆ ಹೊಳೆಯುವ ಮೊಣಕಾಲಿನ ತನಕದ ಬೂಟುಗಳು, ತಲೆಯ ಮೇಲೊಂದು ಛತ್ರಿಯಂತಹ ಟೋಪಿ, ಸೊಂಟಕ್ಕೆ ಸಿಕ್ಕಿಸಿದ ಗನ್ನು – ಪಕ್ಕಾ ಕೌಬಾಯ್‌ಗಳಿವರು. ಮೂವರಿಗೂ ಯಾರ ಮೇಲೆಯೂ ನಂಬಿಕೆಯಿಲ್ಲ. ಒಬ್ಬರನ್ನು ಇನ್ನೊಬ್ಬರು ಕೊಲ್ಲಲು ಯಾವ ಅಳುಕೂ ಇಲ್ಲ. ಆದರೆ ನಿಧಿ ಹುಗಿದಿಟ್ಟಿರುವ ಸ್ಥಳದ ಮಾಹಿತಿ ಒಬ್ಬೊಬ್ಬರಿಗೆ ಒಂದಿಷ್ಟು ತುಣುಕಾಗಿ ಗೊತ್ತಿದೆ, ಪೂರ್ತಿಯಾಗಿ ಯಾರಿಗೂ ಗೊತ್ತಿಲ್ಲ. ಆ ಮೂರು ತುಣುಕುಗಳು ಸೇರಿದಾಗ ಮಾತ್ರ ಸಂಪೂರ್ಣ ಮಾಹಿತಿ ಗೊತ್ತಾಗುತ್ತದೆ. ಆದ್ದರಿಂದ ಮೂವರೂ ಜೀವಂತವಾಗಿದ್ದು ನಿಧಿಯನ್ನು ಹುಡುಕುವುದು ಅನಿವಾರ್ಯವಾಗಿದೆ. ಆ ಕಾರಣದಿಂದಾಗಿ ರೋಚಕ ಪ್ರಯಾಣವೊಂದು ನಡೆಯುತ್ತದೆ!